# ಆಕಾಶದಲ್ಲಿ ಹಾರುವ ಕನಸಿಗೆ ರೆಕ್ಕೆ ಕಟ್ಟಬೇಕು!



**ಸಾಗರ್**
**ಝೀ ಕನ್ನಡ 'ಸತ್ಯ'ದ ಕಾರ್ತಿಕ್**

◆ 'ಸತ್ಯ'ದ ಕಥೆಯ ಹರವಿನ ಬಗ್ಗೆ ನೀವು ಏನಂತೀರಾ?

ಸತ್ಯ ತನ್ನ ವೃತ್ತಿ ಬದುಕು, ವೈಯಕ್ತಿಕ ಜೀವನವನ್ನು ಹೇಗೆ ನಿಭಾಯಿಸುತ್ತಾರೆ ಎನ್ನುವುದು ಈಗ ಮುಖ್ಯ ಆಗುತ್ತಿದೆ. ಅಪರಾಧ ಪ್ರಕರಣಗಳ ವಿಚಾರಣೆ ಮತ್ತು ಕಾನೂನು ಸಂಬಂಧಿ ಹೋರಾಟ ಕಥೆಗೆ ಮುಖ್ಯ ಆಗಿದೆ. ಕೌಟುಂಬಿಕ ಬದುಕಿನ ಚಿತ್ರಣ ಸ್ವಲ್ಪ ಕಡಿಮೆಯಾಗಿದೆ.

◆ ತೆಲುಗು–ಕನ್ನಡ ಧಾರಾವಾಹಿಗಳಲ್ಲಿ ಭಿನ್ನತೆಯನ್ನು ಹೇಗೆ ಕಂಡಿದ್ದೀರಿ?

ಸಹೋದರ ಭಾಷೆಯಾಗಿದ್ದರಿಂದ ಒಂದಿಷ್ಟು ಸಾಮ್ಯತೆ ಇದೆ. ಒಬ್ಬ ನಟನಿಗೆ ಭಾಷೆ ಅಭಿನಯಕ್ಕೆ ಅಡ್ಡಿ ಅಲ್ಲ ಎಂದು ಬಲ್ಲವರು ಹೇಳುತ್ತಾರೆ. ಪಾತ್ರದ ಮೇಲೆ ನಟನಿಗೆ ಎಷ್ಟು ಹಿಡಿತವಿದೆ, ಆತನ ಶ್ರಮ ಎಷ್ಟಿರುತ್ತೆ, ಅದನ್ನು ಖುಷಿಯಿಂದ ಮಾಡುತ್ತಾನೆ ಎನ್ನುವುದು ಮಾತ್ರ ಮುಖ್ಯ. ನಾಲ್ಕೈದು ವರ್ಷ ಒಂದೇ ಪಾತ್ರ ನಿರ್ವಹಿಸಿದಾಗ ಏಕತಾನತೆ ಉಂಟಾಗಬಹುದು. ರಂಗಭೂಮಿ ಹಿನ್ನೆಲೆಯಿಂದ ಬಂದಿದ್ದರಿಂದ ಬದಲಾವಣೆ ಇರಬೇಕು ಎಂದು ನನಗೆ ಅನ್ನಿಸುತ್ತದೆ. ಆದರೂ ತಾಂತ್ರಿಕ ಅನಿವಾರ್ಯತೆ ಇರುವುದರಿಂದ ಒಂದಿಷ್ಟು ಹೊಂದಾಣಿಕೆ ಕೂಡ ಬೇಕಾಗುತ್ತದೆ.

ತೆಲುಗು ಕಿರುತೆರೆಯಲ್ಲೂ ನಟಿಸುತ್ತಿದ್ದೇನೆ. ಅಲ್ಲಿನ ಸಂಸ್ಕೃತಿಯಲ್ಲಿ ಭಿನ್ನತೆ ಇಲ್ಲ. ಅಲ್ಲಿಯ ವಾತಾವರಣ ತುಂಬ ಚೆನ್ನಾಗಿದೆ ಎಂದೆನಿಸಿದೆ. ನಟನೊಬ್ಬ ಭಾಷೆ ಗೊತ್ತಿಲ್ಲದಿದ್ದರೂ ಅಭಿನಯಿಸಬಹುದು. ಆದರೆ, ಕೆಲವೊಂದು ಭಾವನೆಯನ್ನು ಪ್ರಕಟಿಸುವುದು ಕಷ್ಟ ಆಗಬಹುದು. ನಟನಿಗೆ ಭಾಷೆಯ ಮೂಲ ಸೊಗಡನ್ನು ತಿಳಿಯಬೇಕಾಗುತ್ತದೆ. ಒಟ್ಟಾರೆ ನಿರ್ದೇಶಕರ ಅಭಿರುಚಿಯ ಮೇಲೆ ಅದೆಲ್ಲ ನಿರ್ಧಾರವಾಗುತ್ತದೆ.

◆ ನಿಮ್ಮ ಸಿನಿಮಾ ಶೋಧದ ಯಾನ ಎಲ್ಲಿಗೆ ಬಂತು?

ಒಂದೆರಡು ಸಿನಿಮಾ ಮಾತುಕತೆಯ ಹಂತದಲ್ಲಿ ಇವೆ. ಒಂದು ಪ್ರಾಜೆಕ್ಟ್ ಒಪ್ಪಿಕೊಂಡಿದ್ದೇನೆ. ಇನ್ನೇನು ಆರಂಭ ಆಗಬಹುದು ಎನ್ನುವ ಕುತೂಹಲ ಇದೆ. ಸಿನಿಮಾರಂಗ ಸಂಕ್ರಮಣ ಸ್ಥಿತಿಯಲ್ಲಿರುವುದರಿಂದ ನಿರ್ಮಾಪಕರೂ ಹಿಂದೆ ಮುಂದೆ ನೋಡುವಂತೆ ಆಗಿದೆ. ಒಟಿಟಿ ಮಾಡುವುದೋ ಟಾಕೀಸ್‌ಗೆ ಬಿಡುಗಡೆ ಮಾಡಲು ಮಾಡುವುದೋ ಎಂಬ ಗೊಂದಲ ಅವರಿಗೆ ಕಾಡುತ್ತಿದೆ. ಕನ್ನಡ–ತೆಲುಗಿನಲ್ಲಿ ಎರಡೂ ಕಡೆ ನಾನು ಒಂದಿಷ್ಟು ಪರಿಚಯ ಇದ್ದೇನೆ. ತೆಲುಗಿನಲ್ಲೂ ಮಾಡಬಹುದು. ಅಲ್ಲೂ ಏಕಪರದೆಯ ಟಾಕೀಸ್ ಕಡಿಮೆ ಆಗುತ್ತಿವೆ. ಮಲ್ಟಿಸ್ಕ್ರೀನ್ ಜೊತೆ ಒಟಿಟಿ ಕೂಡ ಮುನ್ನೆಲೆಗೆ ಬಂದಿರುವುದರಿಂದ ಕನ್ನಡ ಕಂಟೆಂಟ್ ಬೇರೆಯ ಸವಾಲನ್ನು ಎದುರಿಸುತ್ತಿದೆ. ಬೆಂಗಳೂರಿಗರು ಎಲ್ಲ ಭಾಷೆಯ ಸಿನಿಮಾಗಳನ್ನು ನೋಡುತ್ತಾರೆ. ಅವರು ಒಂದೇ ಭಾಷೆಗೆ ಅಂಟಿಕೊಂಡಿಲ್ಲ. ಇದು ಕೂಡ ಯೋಚಿಸಬೇಕಾದ ಸಂಗತಿ. ಏನೇ ಆದರೂ ಕನ್ನಡದ ಖುಷಿ ಬೇರೆ ಎಲ್ಲೂ ನನಗೆ ಸಿಗಲ್ಲ. ನಮ್ಮತನವನ್ನು ಮೂಡಿಸುವುದು ಅದೊಂದೇ. ನಮ್ಮ ಭಾಷೆಯ ಡೈಲಾಗ್ ಹೇಳುವ ಮಜಾನೇ ಬೇರೆ.

◆ 'ಸತ್ಯ'ಳಂತಹ ಡಾಮಿನೆಂಟ್ ಪಾತ್ರದ ನಡುವೆ ನಿಮ್ಮ ಪಾತ್ರ ಮಸುಕಾಗಿಬಿಡುತ್ತಾ?

ಎಲ್ಲೋ ಒಂದು ಕಡೆ ಹಾಗೆ ಅನ್ನಿಸಬಹುದು. ಬಹುತೇಕ ಎಲ್ಲ ಧಾರಾವಾಹಿಗಳ ಕೇಂದ್ರ ಮಹಿಳೆ. ಅಲ್ಲಿ ಅವರೇ ಸಮಸ್ಯೆಯನ್ನು ಹುಟ್ಟುಹಾಕುತ್ತಾರೆ. ಅದರ ಪರಿಹಾರಕ್ಕೂ ಮಹಿಳೆಯೇ ಬರುತ್ತಾಳೆ. ಧಾರಾವಾಹಿಯನ್ನು ನಿರ್ದಿಷ್ಟ ವೀಕ್ಷಕರ ದೃಷ್ಟಿಯಲ್ಲಿ ಮಾಡುವುದರಿಂದ ಅದು ಸಹಜ. ಕೆಲವೊಮ್ಮೆ ಕೆಲವು ಪಾತ್ರಗಳ ಪ್ರಾಮುಖ್ಯತೆ ಕಡಿಮೆ ಆಗಿದ್ದರೂ ಕಥನದ ಉದ್ದೇಶ, ವೀಕ್ಷಕರ ಆಶಯವನ್ನು ಒಟ್ಟಾಗಿ ತೆಗೆದುಕೊಂಡು ಹೋಗುತ್ತದೆ. ಕಥೆಗೆ ಜೋಡಿಯ ಸನ್ನಿವೇಶ ಅಥವಾ ಜೋಡಿಗಳ ನಡುವೆ ಬಾಂಧವ್ಯದ ಸಂದರ್ಭ ಬಂದಾಗ ಅಲ್ಲಿ ಸಮತೋಲನ ಆಗುತ್ತದೆ. ಸೀರಿಯಲ್ ಅಂದರೆ ಮಹಿಳೆಯರನ್ನೇ ಮನದಲ್ಲಿ ಇಟ್ಟುಕೊಂಡು ಮಾಡಿರುತ್ತಾರೆ. 'ಸತ್ಯ' ಬಹುಶಃ ನನ್ನ ತಂದೆ ಮಾತು ಕೇಳುತ್ತಾರೆ. ಆಕೆಗೆ ತೊಂದರೆ ಎದುರಾದರೆ ಅದಕ್ಕೆ ನೆರವು ನನ್ನಿಂದ ಸಿಗುತ್ತದೆ.

◆ ನಿಮ್ಮ ಕನಸಿನ ಪಾತ್ರಗಳ ಬಗ್ಗೆ ಹೇಳುವುದಾದರೆ.

ನನಗೆ ತುಂಬ ಪಾತ್ರಗಳನ್ನು ಮಾಡುವ ಕನಸು ಉಳಿದಿದೆ. ನೆಗೆಟಿವ್ ಪಾತ್ರಗಳನ್ನು ನಿರ್ವಹಿಸಬೇಕು. ತುಂಬ ಸಾಮರ್ಥ್ಯವನ್ನು ಬಯಸುವ ಪಾತ್ರವನ್ನೂ ಮಾಡಬೇಕು. ನಿಜ ಜೀವನದ ಸರಿ ತಪ್ಪುಗಳ ಸಾಮಾಜಿಕ ಮೌಲ್ಯ ತೆರೆಯಲ್ಲಿ ಭಿನ್ನವಾಗಿರುತ್ತದೆ. ಹೀಗಿರುವಾಗ ತೆರೆಯಲ್ಲಿ ಕಪ್ಪು–ಬಿಳುಪಿನಂತೆ ಇರುವ ಪಾತ್ರಕ್ಕಿಂತ ಗ್ರೇ ಇರುವಂತಹ ಪಾತ್ರವನ್ನು ಮಾಡಬೇಕು. ಖಳನಾಯಕನ ಪಾತ್ರವನ್ನು ಮಾಡಿಲ್ಲ, ನನ್ನ ಸಾಮರ್ಥ್ಯವನ್ನು ನಾನು ಶೋಧಿಸಿಲ್ಲ. ನನಗೆ ಸೌಮ್ಯ ಸ್ವಭಾವದ ಪಾತ್ರಗಳೇ ಹೆಚ್ಚು ಕೊಡುತ್ತಾರೆ. ವೈಯಕ್ತಿಕವಾಗಿ ನಾನು ಹಾಗೆ ಇಲ್ಲ. ಸಂಕೋಚ ನನಗಿಲ್ಲ. ನನ್ನ ಮಾತಿನಲ್ಲಿ ಸ್ಪಷ್ಟತೆ ಇದೆ. 'ಮನಸಾರೆ'ಯಲ್ಲಿ ನನ್ನ ವ್ಯಕ್ತಿತ್ವಕ್ಕೆ ಹತ್ತಿರವಾದ ಪಾತ್ರ ಮಾಡಿದೆ. ನನ್ನ ರೀತಿನೇ ಕಾಣಿಸಿಕೊಳ್ಳುವುದು ಅಭಿನಯ ಎಂದು ನನಗೆ ಅನ್ನಿಸುವುದಿಲ್ಲ. ನನಗೆ ವಾಯುಸೇನೆಯ ಬಗ್ಗೆ ಪ್ಯಾಷನ್ ಇದೆ. ವಾಯುಸೇನೆಗೆ ಸಂಬಂಧಿಸಿದಂತಹ ಪಾತ್ರವನ್ನು ಮಾಡಬೇಕು ಎನ್ನುವುದು ನನ್ನ ದೊಡ್ಡ ಕನಸುಗಳಲ್ಲಿ ಒಂದು.

■ ರಾಘವೇಂದ್ರ ಕೆ.